3/17 [illegible] 11

ವಾಣಿಜ್ಯಿಕ ಉತ್ಪಾದನೆಗೆ ಸಜ್ಜುಗೊಂಡಿದೆ ಎಂದು ದಿನದ ಹಿಂದಷ್ಟೇ ಘೋಷಿಸಲಾಗಿದ್ದ ರಾಯಚೂರಿನ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಒಂದನೇ ಘಟಕವನ್ನು ಗುರುವಾರ ಸ್ಥಗಿತಗೊಳಿಸಿ ಸಣ್ಣಪುಟ್ಟ ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ.

10/3/17 · ಉದಯವಾಣಿ

ಕೈಗಾರಿಕೆಗಳ ಕ್ಷಿಪ್ರ ಪ್ರಗತಿಗೆ ಸಿಗದ 'ಇಂಧನ'

■ ಮೂಲ ಸೌಕರ್ಯಗಳಿಲ್ಲದೆ ಸೊರಗಿವೆ ಕೈಗಾರಿಕೆಗಳು ■ ಅನ್ಯ ರಾಜ್ಯಗಳತ್ತ ಉದ್ಯಮಿಗಳ ಗುಳೆ

■ ಎಂ.ಕೀರ್ತಿಪ್ರಸಾದ್

ಬೆಂಗಳೂರು: 'ಇನ್‌ವೆಸ್ಟ್ ಕರ್ನಾಟಕ' ಹಾಗೂ 'ಪ್ರವಾಸಿ ಭಾರತೀಯ ದಿವಸ್' ಸಮಾವೇಶಗಳ ಮೂಲಕ ಕರ್ನಾಟಕದಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರಿದ ಜಾಗತಿಕ ಮಟ್ಟದ ಹೂಡಿಕೆದಾರರು ಮೂಲ ಸೌಕರ್ಯ ಕೊರತೆ ಕಾರಣಕ್ಕೆ ನೆರೆಯ ರಾಜ್ಯಗಳತ್ತ ಗುಳೆ ಹೋಗುವತ್ತ ಚಿತ್ತ ಹರಿಸಿದ್ದಾರೆ. ಕೈಗಾರಿಕೆಗಳಿಗೆ ಅತ್ಯವಶ್ಯಕವಾಗಿ ಬೇಕಾದ ಇಂಧನ ಉತ್ಪಾದನೆಯಲ್ಲೂ ಸಹ ಸರ್ಕಾರ ನಿರೀಕ್ಷಿತ ಗುರಿ ತಲುಪದಿರುವುದರಿಂದ ತೀವ್ರ ವಿದ್ಯುತ್ ಅಭಾವದಿಂದ ಕೈಗಾರಿಕೆಗಳು ರಾಜ್ಯದಿಂದ ವಿಮುಖವಾಗುವ ಸ್ಥಿತಿ ನಿರ್ಮಾಣವಾಗಿದೆ.

ನಮ್ಮ ಬಜೆಟ್

2016-17ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ವಾಣಿಜ್ಯ- ಕೈಗಾರಿಕೆ ಮತ್ತು ಇಂಧನ ಕ್ಷೇತ್ರದ ಅಭಿವೃದ್ಧಿ ಮೂಲ ಸೌಕರ್ಯ ಒದಗಿಸಲು ಹಲವಾರು ಆಕರ್ಷಕ ಯೋಜನೆಗಳನ್ನು ಪ್ರಕಟಿಸುವಾಗ ತೋರಿದ ಆಸಕ್ತಿಯನ್ನು ಅನುದಾನಬಿಡುಗಡೆಗೆತೋರದಿರುವುದರಿಂದ ಹೊಸ ಕೈಗಾರಿಕೆಗಳು ಸ್ಥಾಪನೆಯಾಗದೆ ಕನ್ನಡಿಗರಿಗೆ ಉದ್ಯೋಗ ಸಿಕ್ಕಿಲ್ಲ, ವಿದ್ಯುತ್ ಉತ್ಪಾದನೆಯಾಗದೆ ಕೈಗಾರಿಕೆಗಳು ರಾಜ್ಯದಲ್ಲಿ ಬೆಳಕು ಕಂಡಿಲ್ಲ.

ವಾಣಿಜ್ಯಮತ್ತುಕೈಗಾರಿಕಾಕ್ಷೇತ್ರಕ್ಕೆಸಂಬಂಧಪಟ್ಟಂತೆ 2016-17ಮಹತ್ತರವರ್ಷಎಂದರೆತಪ್ಪಾಗಲಾರದು. ಜಾಗತಿಕ ಹೂಡಿಕೆದಾರರನ್ನು ಆಕರ್ಷಿಸಲು ಸರ್ಕಾರ ಆಯೋಜಿಸಿದ 'ಇನ್‌ವೆಸ್ಟ್ ಕರ್ನಾಟಕ' ಸಮಾವೇಶಕ್ಕೆ ನಿರೀಕ್ಷೆಗೂ ಮೀರಿ ಸ್ಪಂದನೆ ದೊರೆಯಿತು. ಜತೆಗೆ



ಮೊಟ್ಟ ಮೊದಲ ಬಾರಿಗೆ 'ಪ್ರವಾಸಿ ಭಾರತೀಯ ದಿವಸ್' ಸಮಾವೇಶವನ್ನೂ ಬೆಂಗಳೂರಿನಲ್ಲಿ ಆಯೋಜಿಸುವ ಮೂಲಕ ಮತ್ತೊಂದು ಮೈಲಿಗಲ್ಲು ದಾಟಿತ್ತು. ಆದರೆ ಸರ್ಕಾರ ಉದ್ಯಮಿಗಳನ್ನು ಸೆಳೆಯಲು ತೋರಿದ ಉತ್ಸಾಹವನ್ನು ಕೈಗಾರಿಕೆಗಳ ಸ್ಥಾಪನೆಗೆ ಅಗತ್ಯವಾದ ಮೂಲ ಸೌಕರ್ಯ ಕಲ್ಪಿಸಲು ತೋರಲಿಲ್ಲ ಎಂಬ ಆರೋಪವಿದೆ.

ಶೇ.37ರಷ್ಟು ಅನುದಾನವಷ್ಟೇ ಬಿಡುಗಡೆ: ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಕ್ಕೆ ಆದ್ಯತೆ ನೀಡಿದ ಸರ್ಕಾರ ಪ್ರಸಕ್ತ ವರ್ಷ 1298 ಕೋಟಿ ರೂ. ಅನುದಾನ ಘೋಷಿಸಿತ್ತು. ಆದರೆ ಮೂರನೇ ತ್ರೈಮಾಸಿಕ ಅವಧಿ ಮುಕ್ತಾಯಗೊಂಡ ಡಿಸೆಂಬರ್ ಅಂತ್ಯಕ್ಕೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಕೇವಲ 481 ಕೋಟಿ ರೂ. ಅಂದರೆ, ಘೋಷಿತ ಅನುದಾನದ ಶೇ.37ರಷ್ಟು ಹಣವಷ್ಟೇ ಬಿಡುಗಡೆಯಾಗಿರುವುದರಿಂದ ಬಹುತೇಕ ಯೋಜನೆಗಳು ಇನ್ನೂ ಪ್ರಸ್ತಾವನೆ ಹಂತದಲ್ಲೇ ಇವೆ. ಹಾಲಿ ಕೈಗಾರಿಕಾ ಪ್ರದೇಶಗಳಲ್ಲಿ ಮೂಲ ಸೌಕರ್ಯವನ್ನು ಮೇಲ್ದರ್ಜೆಗೇರಿಸಲು 175 ಕೋಟಿ ರೂ. ಘೋಷಿಸಲಾಗಿತ್ತು. ಆದರೆ ಒಟ್ಟಾರೆ ಇಲಾಖೆಗೆ 481 ಕೋಟಿ ರೂ.ಬಿಡುಗಡೆಯಾಗಿರುವುದರಿಂದ ಕೈಗಾರಿಕಾ ವಲಯದ ಮೂಲ ಸೌಕರ್ಯ ಅಭಿವೃದ್ಧಿಗೂ ಅಗತ್ಯ ಅನುದಾನ ಸಿಗದಂತಾಗಿದೆ.

ಶೇ.73ರಷ್ಟು ಅನುದಾನ ಬಿಡುಗಡೆ

ಪ್ರಸಕ್ತ ಆಯವ್ಯಯದಲ್ಲಿ ಇಂಧನ ಇಲಾಖೆಗೆ ಒಟ್ಟು 7932 ಕೋಟಿ ರೂ. ಅನುದಾನ ಪ್ರಕಟಿಸಲಾಗಿತ್ತು. ಕಳೆದ ಡಿಸೆಂಬರ್ ಅಂತ್ಯದವರೆಗೆ 5791 ಕೋಟಿ ರೂ. ಬಿಡುಗಡೆಯಾಗಿದ್ದು, ಶೇ.73ರಷ್ಟು ಅನುದಾನ ಬಳಕೆಗೆ ಹಂಚಿಕೆಯಾಗಿದೆ. ಇಷ್ಟಾದರೂ ವಿದ್ಯುತ್ ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳವಾಗದ ಕಾರಣ ದುಬಾರಿ ಬೆಲೆಗೆ ವಿದ್ಯುತ್ ಖರೀದಿಸಿ ಬಳಸಬೇಕಾದ ಸ್ಥಿತಿ ಇದೆ. ನಿರೀಕ್ಷಿತ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯಾಗದಿದ್ದರೂ ಬೇಡಿಕೆ ಪ್ರಮಾಣ 8,000 ಮೆಗಾವ್ಯಾಟ್‌ನಿಂದ 10,000 ಮೆಗಾವ್ಯಾಟ್‌ಗೆ ಏರಿಕೆಯಾದರೂ ಬಹುತೇಕ ಪೂರೈಸುವಲ್ಲಿ ಇಲಾಖೆ ಯಶಸ್ವಿಯಾಗಿರುವುದು ಸಮಾಧಾನಕರ ಸಂಗತಿ.

ಅನ್ಯ ರಾಜ್ಯಗಳತ್ತ ಉದ್ಯಮಿಗಳ ಗುಳೆ: ಪ್ರಸಕ್ತ ವರ್ಷವಿರಲಿ, ಕಳೆದ ಹಣಕಾಸು ವರ್ಷದಲ್ಲಿ ಒಡಂಬಡಿಕೆ ಮಾಡಿಕೊಂಡ ಹಲವು ಕೈಗಾರಿಕೆಗಳೂ ಈವರೆಗೆ ಆರಂಭವಾಗಿಲ್ಲ. ರಿಯಾಯ್ತಿ ದರದಲ್ಲಿ ಭೂಮಿ ಹಾಗೂ ಏಕ ಗವಾಕ್ಷಿ ವಿಧಾನದ ಮೂಲಕ ಅಗತ್ಯ ಅನುಮೋದನೆಗಳನು ನೀಡುತ್ತಿದ್ದರೂ ಉದ್ಯಮ ಆರಂಭಿಸಲು ಪೂರಕವಾದ ಸೌಲಭ್ಯವನ್ನು ಸಕಾಲದಲ್ಲಿಒದಗಿಸುವಲ್ಲಿಸರ್ಕಾರವಿಫಲವಾಗಿದೆ. ಈ ನಡುವೆ ನೆರೆಯ ತೆಲಂಗಾಣ ಹಾಗೂ ಆಂಧ್ರಪ್ರದೇಶ ಹೂಡಿಕೆದಾರರನ್ನು ಸೆಳೆಯಲು ಪೈಪೋಟಿ ಮೇಲೆ ರಿಯಾಯ್ತಿಗಳನ್ನು ನೀಡುತ್ತಿರುವುದರಿಂದ ಟಿವಿಎಸ್ ಕಂಪನಿ ಸೇರಿದಂತೆ ಇತರೆ ಕೆಲ ಉದ್ಯಮಗಳು ಅನ್ಯರಾಜ್ಯಗಳತ್ತ ಗುಳೆ ಹೊರಟಿದ್ದು, ರಾಜ್ಯದಲ್ಲಿನ ಕೈಗಾರಿಕಾ ಪ್ರಗತಿಯ ಸ್ಥಿತಿಗತಿಯನ್ನು ತೋರಿಸುತ್ತದೆ.

ಗುರಿ ತಲುಪದ ವಿದ್ಯುತ್ ಉತ್ಪಾದನೆ: ಕೈಗಾರಿಕೆಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ಮೂಲ ಸೌಕರ್ಯದ ಜತೆಗೆ ಇಂಧನವೂ ಅತ್ಯವಶ್ಯಕ. ಆದರೆ ಇಂಧನ ಕ್ಷೇತ್ರದಲ್ಲಿ ಕರ್ನಾಟಕ ಸ್ವಾವಲಂಬನೆ ಸಾಧಿಸಲಿದೆ ಎಂಬುದು ಕೇವಲ ಘೋಷಣೆಗಷ್ಟೇ ಸೀಮಿತವಾಗಿರುವುದು ಹಿಂದಿನ ಸರ್ಕಾರದಿಂದಲೂ ನಡೆದು ಬಂದಿದೆ. ಪ್ರಸಕ್ತ ವರ್ಷದಲ್ಲೂ ಘೋಷಿತ ಪ್ರಮಾಣದಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಗುರಿ ತಲುಪುವಲ್ಲಿ ವಿಫಲವಾಗಿದ್ದು, ಅಲ್ಪ ಪ್ರಮಾಣದಲ್ಲಷ್ಟೇ ಹೆಚ್ಚುವರಿ ವಿದ್ಯುತ್ ಉತ್ಪಾದನೆಗೆ ಇಂಧನ ಇಲಾಖೆ ತೃಪ್ತಿಪಡಬೇಕಾಗಿದೆ.

ಪ್ರಸಕ್ತ ವರ್ಷದಲ್ಲಿ ಬಳ್ಳಾರಿಯ ಯರಮರಸ್ ಘಟಕ-2ರಿಂದಮಾರ್ಚ್‌ನೊಳಗೆ705 ಮೆಗಾವ್ಯಾಟ್ (ಗರಿಷ್ಠ ಸಾಮರ್ಥ್ಯ, 800 ಮೆಗಾವ್ಯಾಟ್) ವಿದ್ಯುತ್ ಉತ್ಪಾದನೆ ಆರಂಭವಾಗುವುದಾಗಿ ಮುಖ್ಯಮಂತ್ರಿಗಳು ಘೋಷಿಸಿದ್ದರು. ಆದರೆ ಘಟಕ-2ರ ವಿಚಾರವಿರಲಿ 2015-16ನೇ ಸಾಲಿನಲ್ಲಿ ಯರಮರಸ್ ಘಟಕ- 1ರಿಂದ 800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ ಎಂಬ ಭರವಸೆಯೇ ಈವರೆಗೂ ಈಡೇರಿಲ್ಲ. ತುಮಕೂರಿನ ಪಾವಗಡ ತಾಲ್ಲೂಕಿನಲ್ಲಿ ಉದ್ದೇಶಿತ 2000 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ್ ಪಾರ್ಕ್ ನಿರ್ಮಾಣ ಯೋಜನೆಯಡಿ 2017ರ ಮಾರ್ಚ್ ಅಂತ್ಯಕ್ಕೆ 600 ಮೆಗಾವ್ಯಾಟ್ ಉತ್ಪಾದನೆ ಆರಂಭವಾಗುವ ಭರವಸೆಯೂ ಹುಸಿಯಾಗಿದೆ. ಮುಂದಿನ ಜೂನ್‌ಗೆ ಮೊದಲ ಹಂತದಲ್ಲಿ 600 ಮೆಗಾವ್ಯಾಟ್ ಉತ್ಪಾದನೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

60 ಹಿಂದುಳಿದ ತಾಲ್ಲೂಕುಗಳಲ್ಲಿ ತಲಾ 20 ಮೆಗಾವ್ಯಾಟ್ ಉತ್ಪಾದನೆ ಯೋಜನೆಯೂ ಇನ್ನೂ ಟೆಂಡರ್ ಹಂತಕ್ಕೆ ಸೀಮಿತವಾಗಿದೆ. ಪರ್ಯಾಯ ಇಂಧನ ಮೂಲಗಳ ಪೈಕಿ ಸೌರಶಕ್ತಿಯಿಂದ 800 ಮೆಗಾವ್ಯಾಟ್, ಪವನ ಶಕ್ತಿ ಮೂಲದಿಂದ 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಿದ್ದು, 1000 ಮೆಗಾವ್ಯಾಟ್‌ನಷ್ಟು ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಯಲಹಂಕದಲ್ಲಿ ಅನಿಲ ಆಧಾರಿತ ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಚಾಲನೆ ದೊರಕಿದ್ದು ಭವಿಷ್ಯದಲ್ಲಿ ಬೆಂಗಳೂರಿಗೆ ಸುಸ್ಥಿರ ವಿದ್ಯುತ್ ಪೂರೈಕೆಗೆ ಸಹಕಾರಿಯಾಗುವ ನಿರೀಕ್ಷೆ ಮೂಡಿದೆ.

ತಿಳಿಸಿದ್ದರು.

10/3/17 ಪ್ರಜಾವಾಣಿ [illegible]

ವಿದ್ಯುತ್ ಪೂರೈಕೆ ಸ್ಥಗಿತ; ಮೂವರು ರೋಗಿಗಳ ಸಾವು

ಚೆನ್ನೈ (ಐಎಎನ್‌ಎಸ್): ಪುದುಚೇರಿಯ ಇಂದಿರಾ ಗಾಂಧಿ ಸರ್ಕಾರಿ ಆಸ್ಪತ್ರೆಯಲ್ಲಿ ಏಳು ನಿಮಿಷ ವಿದ್ಯುತ್ ಪೂರೈಕೆ ಸ್ಥಗಿತಗೊಂಡ ಕಾರಣ ಮೂವರು ರೋಗಿಗಳು ಮೃತಪಟ್ಟಿರುವ ಘಟನೆ ನಡೆದಿದೆ.

ಮೂತ್ರಪಿಂಡ ವಿಫಲವಾಗಿರುವ ಬಡ ರೋಗಿಗಳಿಗೆ ಆಸ್ಪತ್ರೆಯಲ್ಲಿ ಉಚಿತವಾಗಿ ಡಯಾಲಿಸಿಸ್ ಮಾಡಲಾಗುತ್ತದೆ. ವಿದ್ಯುತ್ ಪೂರೈಕೆ ಸ್ಥಗಿತಗೊಂಡ ಸಂದರ್ಭದಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದ 55 ಮತ್ತು 75 ವರ್ಷದ ಇಬ್ಬರು ಮಹಿಳೆಯರು ಮತ್ತೊಬ್ಬ ಪುರುಷರು ಮೃತಪಟ್ಟಿದ್ದಾರೆ. ಮೃತರ ಕುಟುಂಬಕ್ಕೆ ₹ 5 ಲಕ್ಷ ಪರಿಹಾರ ಘೋಷಿಸಲಾಗಿದೆ.

ಮುಖ್ಯಗ್ರಿಡ್‌ನಿಂದ ವಿದ್ಯುತ್ ಪೂರೈಕೆ ಸ್ಥಗಿತಗೊಂಡ ಒಂದು ನಿಮಿಷದ ಒಳಗೇ ಜನರೇಟರ್ ಮೂಲಕ ವಿದ್ಯುತ್ ಪೂರೈಕೆಯಾಗುವ ವ್ಯವಸ್ಥೆ ಆಸ್ಪತ್ರೆಯಲ್ಲಿದೆ. ಆದರೆ ಗುರುವಾರ ಜನರೇಟರ್ 7 ನಿಮಿಷ ತಡವಾಗಿ ವಿದ್ಯುತ್ ಪೂರೈಯಾಗಿದೆ.